ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.201/2018 ,

ಚಾಸಾ-22 ಪ್ರಾಸಾ -11

| | |
|---|---|
| ಹೆಸರು | ಶಂಕರ ನಾಯರಿ |
| ತಂದೆಯ ಹೆಸರು | ದಿ\| ನಾಗಪ್ಪ ನಾಯರಿ |
| ವಯಸ್ಸು | 66 ವರ್ಷ |
| ಕೆಲಸ | ನಿವೃತ್ತ ಪಿ.ಎಸ್.ಐ |
| ವಾಸ | ಬ್ರಹ್ಮಾವರ , ಉಡುಪಿ |
| ಪ್ರಮಾಣೀಕರಿಸಿದ ದಿನಾಂಕ | 15-10-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ನಾನು ಏಪ್ರಿಲ್ -2013 ರಿಂದ ಮೇ-2016 ರವರೆಗೆ ಮೂಡಬಿದ್ರೆ ಪೊಲೀಸ್ ಠಾಣೆಯಲ್ಲಿ ಅಪರಾಧ ವಿಭಾಗ ಪೊಲೀಸ್ ಸಹಾಯ ಉಪ ನೀರಿಕ್ಷಕನಾಗಿ ಕರ್ತವ್ಯ ನಿರ್ಹಿಸಿರುತ್ತೇನೆ

ನಾನು ದಿಃ 25-09-2017 ರಂದು ಠಾಣಾ ಪ್ರಭಾರದಲ್ಲಿ ಇದ್ದಾಗ ಸಂಜೆ 5-00 ರ ಸಮಯಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ , ಠಾಣಾ ಮೊಕದ್ದಮೆ ಸಂಖ್ಯೆ 397/2017 ರಂತೆ ಕಲಂ 454 , 380 ಐ.ಪಿ.ಸಿಯಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಿನ ಅಧಿಕಾರಿಗಳಿಗೆನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಪ್ರ.ವ.ವರದಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಪ್ರಕರಣದ ಕಡತವನ್ನು ಚಾಸಾ-23 ರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ

ಸರಹದ್ದಿನಲ್ಲಿ ಹಗಲು ಕಳ್ಳತನ ಪದೇ ಪದೇ ಕಳ್ಳತನವಾಗುತ್ತಿದ್ದ ಕಾರಣ ಆರೋಪಿತರನ್ನು ಪತ್ತೆ ಮಾಡಲು ಚಾಸಾ-23 ರವರು ನೀಡಿದ ಸೂಚನೆಯ ಮೇರೆಗೆ ಸರಹದ್ದಿನಲ್ಲಿ ಬಾತ್ಮಿದಾರರನ್ನು ನೇಮಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾಗ , ದಿಃ 18-11-2017 ರಂದು ಸರಹದ್ದಿನ ಮರಿಯಾಡಿ ಎಂಬಲ್ಲಿ ಒಬ್ಬ ಯುವಕ ಸಂಶಯಾಸ್ಪದವಾದ ರೀತಿಯಲ್ಲಿ ಇರುವುದಾಗಿ ಮಾಹಿತಿ ಬಂದ ಮೇರೆಗೆ ಠಾಣೆಯಿಂದ ಚಾಸಾ17 ರಿಂದ ಚಾಸಾ-20 ರವರೊಂದಿಗೆ ಇಲಾಖಾ ವಾಹನದಲ್ಲಿ ಅಲ್ಲಿಗೆ ಹೋಗಿ ಪರಿಶೀಲಿಸಿದಾಗ , ಬಾತ್ಮಿದಾರರು ನೀಡಿದ ಚಹರೆಯುಳ್ಳ ವ್ಯಕ್ತಿಯೊಬ್ಬನು ಕಂಡು ಬಂದಿದ್ದು , ಆತನನ್ನು ವಿಚಾರಿಸಿದಾಗ , ಆತನ ಹೆಸರು ಲೊಕೇಶ್ ಶೆಟ್ಟಿಗಾರ್ , ಬಡಗ ಎಡಪದವು ಗ್ರಾಮ ಎಂದು ತಿಳಿಸಿದ್ದು , ಆ ಸಮಯದಲ್ಲಿ ಆತನು ಅಲ್ಲಿ ಇರುವ ಬಗ್ಗೆ ವಿಚಾರಿಸಿದಾಗ , ಸಹಿಯಾದ ಮಾಹಿತಿಯನ್ನು ನೀಡಿದೆ ಸಂಶಯಸ್ಪಾದವಾಗಿ ಕಂಡು ಬಂದ ಮೇರೆಗೆ ಆತನನ್ನು ಬೆಳಿಗ್ಗೆ 8-30 ಗಂಟೆಗೆ ಹೆಚ್ಚಿನ ವಿಚಾರಣೆಗಾಗಿ ಆತನನ್ನು ವಶಕ್ಕೆ ಪಡೆದುಕೊಂಡು 8-45 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ವರದಿಯೊಂದಿಗೆ ಚಾಸಾ-23 ರವರ ಮುಂದೆ ಆತನನ್ನು ಹಾಜರು ಪಡಿಸಿರುತ್ತೇನೆ. ಆ ದಿನ ವಶಕ್ಕೆ ಪಡೆದುಕೊಂಡ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದು ಸಾಕ್ಷಿ ಆತನನ್ನು ನೋಡಿ ಗುರುತಿಸಿರುತ್ತಾರೆ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್ .ಡಿ ರವರಿಂದಃ

ಆರೋಪಿಯನ್ನು ವಶಕ್ಕೆ ಪಡಿಸಿಕೊಂಡ ಸ್ಥಳದಲ್ಲಿ ನಾವು ಯಾವುದೇ ಮಹಜರನ್ನು ಮಾಡಿರುವುದಿಲ್ಲ . ಪಿರ್ಯಾದಿಯನ್ನು ಸಹ ನಾವು ಈ ಪ್ರಕರಣಕ್ಕೆ ಪೂರಕವಾಗುವಂತೆ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ .

ನಾನು  ಹೇಳುವ ರೀತಿಯಲ್ಲಿ  ಆರೋಪಿಯನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ  ಹೇಳಿ  ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ